ಲಲಿತಮ್ಮನವರು ಹೇಳಿದಾಗ, 'ನಾನು ಶಿಲ್ಪವನ್ನು ಇದ್ದ ಹಾಗೆಯೇ ನೋಡಲು ಬಯಸುತ್ತೇನೆ. ಅಲಂಕಾರ ಆಗಿದ್ದರೆ ಬೇಡ' ಎಂದು ಕಾರಂತರು ಹೇಳುತ್ತಾರೆ. 'ನಮ್ಮ ಅಳತೆಯನ್ನು ಮೀರಲಾರದ ದೇವರು' ಎನ್ನುವ ಪ್ರಬಂಧ ಬರೆದ ಕಾರಂತರನ್ನು ಕುರಿತು, ದೇವರ ಕುರಿತ ಅವರ ಜಿಜ್ಞಾಸೆಯನ್ನು ಕುರಿತು ಅರ್ಥ ಮಾಡಿಕೊಳ್ಳಲಿಕ್ಕೆ ಈ ಪ್ರಸಂಗ ಒಂದು ಹೊಳಹಾಗಿ ಕಾಣಿಸುತ್ತದೆ. ಅದೇ ಲೇಖನದಲ್ಲಿ, ಸಾಲಿಗ್ರಾಮಕ್ಕೆ ಬಂದವರನ್ನು ಬಸ್ ನಿಲ್ದಾಣಕ್ಕೆ ಬೀಳ್ಕೊಡಲು ಬರುವ ಕಾರಂತರು, 'ತಂದೆಯನ್ನು ನೋಡಲು ಮಗಳು ಬಂದಾಗ, ಮಗಳ ಚೀಲವನ್ನು ತಂದೆ ಹಿಡಿಯುವುದು ತಪ್ಪೇ?' ಎಂದು ಲಲಿತಮ್ಮನವರ ಚೀಲವನ್ನು ತಾವೇ ಹಿಡಿದು ತರುತ್ತಾರೆ. ಕಾರಂತರು ಯಾಕೆ ದೊಡ್ಡವರು ಎನ್ನುವುದಕ್ಕೆ ಈ ಪ್ರಸಂಗ ಸಾಕ್ಷಿಯಾಗಿರುವಂತೆಯೇ, ಕಾರಂತರಂಥ ಕಾರಂತರನ್ನೂ ಭಾವುಕರನ್ನಾಗಿಸಿದ ಲಲಿತಮ್ಮನವರ ವ್ಯಕ್ತಿತ್ವದ ಘನತೆಯನ್ನೂ ಇದು ತೋರಿಸುತ್ತದೆ.

'ನೆನಪಿನ ಉಗ್ರಾಣ'ದ ಕೊನೆಯ ಭಾಗ ಲಲಿತಮ್ಮನವರ ಬಂಧುಗಳ ಕುರಿತ ನೆನಪುಗಳಿಗೆ ಮೀಸಲು. ಲಲಿತಮ್ಮನವರ ತಂದೆ ನಾರಾಯಣ ಶಾಸ್ತ್ರಿಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದವರು. ದೊರೆತ ಸರ್ಕಾರಿ ಕೆಲಸವನ್ನು ನಿರಾಕರಿಸಿ, ಬ್ರಿಟೀಷರ ಕೈಕೆಳಗೆ ಕೆಲಸ ಮಾಡುವುದಿಲ್ಲ ಎನ್ನುವ ಸಂಕಲ್ಪ ತೊಟ್ಟವರು. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಶಿಕ್ಷಣ ದೊರಕಿಸಬೇಕು ಎನ್ನುವ ಒತ್ತಾಸೆಯಿಂದ ಹುಟ್ಟೂರಿಗೆ ಬಂದು, ಸಾಮಾಜಿಕ-ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗಿಯಾದವರು. ಅವರ ಆದರ್ಶಗಳು, ಸಾಮಾಜಿಕ ಪ್ರೀತಿಯೇ ಲಲಿತಮ್ಮನವರನ್ನು ಕೈಹಿಡಿದು ನಡೆಸಿದೆ. ಕುಂಟಮ್ಮನಿಗೆ ಮಗು ಆದಾಗ, ಆ ಮನೆಗೆ ದವಸಧಾನ್ಯಗಳನ್ನು ದಿನವೂ ಮಗಳ ಮೂಲಕವೇ ಕಳಿಸುತ್ತಿದ್ದ ಅಪ್ಪನ ವರ್ತನೆಯಲ್ಲಿ, 'ಮಗಳು ಎಲ್ಲರ ಮನೆಗೂ ಹೋಗಬೇಕು' ಎನ್ನುವ ಉದ್ದೇಶ ಲಲಿತಮ್ಮನವರಿಗೆ ಕಾಣಿಸುತ್ತದೆ.

ಲಲಿತಮ್ಮನವರು ದಂತಗೋಪುರದಲ್ಲಿ ಉಳಿದವರಲ್ಲ. ಗಂಡನನ್ನು ಕಳೆದುಕೊಂಡು ವೈಧವ್ಯದ ಬಾಳನ್ನು ಕಣ್ಣೀರಿನಲ್ಲಿ ಕಳೆಯುವ ಮಾದೇವಮ್ಮನ ಕುರಿತು – "ಹೆಣ್ಣುಮಕ್ಕಳ ಬದುಕು ಹೇಗೆಲ್ಲಾ ಅಲಕ್ಷ್ಯಕ್ಕೆ ಈಡಾಗುತ್ತದೆ! ಇದು ಅಂದಿನ ಕತೆ ಅಂತ ಅಂದುಕೊಳ್ಳುವ ಹಾಗಾದರೂ ಇದೆಯೆ ಇವತ್ತು?" ಎನ್ನುವ ಉದ್ಗಾರ, ಅವರ ಸಮಕಾಲೀನ ಎಚ್ಚರವನ್ನು ಸೂಚಿಸುವಂತಿದೆ.

'ನೆನಪಿನ ಉಗ್ರಾಣ' ಕೃತಿಯಲ್ಲಿನ ಪ್ರಸಂಗವೊಂದರಲ್ಲಿ ಚಕ್ಕುಲಿಯ ಕುರಿತಂತೆ ಅಜ್ಜಿ-ಮೊಮ್ಮಗಳ ಮಾತುಕತೆ ಕುತೂಹಲಕರವಾಗಿದೆ. ಅದು ಹೀಗಿದೆ:

ಲಲಿತಮ್ಮ: ಚಕ್ಕುಲಿಗೇಕೆ ಅಷ್ಟೊಂದು ಪ್ರಾಶಸ್ತ್ಯ?

ಅಜ್ಜಿ: ಚಕ್ಕುಲಿ ಸುತ್ತಿದಂತೆ ಹೆಣ್ಣುಮಕ್ಕಳು ಗಂಡನ ಮನೆಗೆ ಹೋಗಿ ತೌರುಮನೆಗೆ ಬರುತ್ತಿರಬೇಕು.'

ಲಲಿತಮ್ಮ: ಕೋಡುಬಳೆ?

ಅಜ್ಜಿ: ಕೋಡುಬಳೆ ಎರಡೂ ಕಡೆ ಸೇರಿಕೊಂಡಂತೆ ಹೆಣ್ಣುಮಕ್ಕಳು ತೌರುಮನೆ-ಗಂಡನಮನೆಗೆ ಹೊಂದಿಕೊಂಡು ಎರಡೂ ಕಡೆ ಸೇರಿಕೊಂಡಿರಬೇಕು.

ಅಜ್ಜಿಯ ಈ ಚಕ್ಕುಲಿ ವ್ಯಾಖ್ಯಾನ, ಲಲಿತಮ್ಮನವರ ಸಾಮಾಜಿಕ ಸಂಬಂಧಗಳನ್ನು ಸೂಚಿಸುವುದರ ಜೊತೆಗೆ, ನಾವೆಲ್ಲ ರೂಢಿಸಿಕೊಳ್ಳಬೇಕಾದ ಮನುಷ್ಯ ಸಂಬಂಧ-ಸಂಪರ್ಕಗಳ ಸ್ವರೂಪದ ಬಗ್ಗೆ ಹೇಳುತ್ತಿರುವ ಮಾತಿನಂತೆ ಕಾಣಿಸುತ್ತದೆ. ಚಕ್ಕುಲಿಯ ವರ್ತುಲ ವರ್ತುಲಗಳು ಮತ್ತು ಚಕ್ಕುಲಿಯ ರುಚಿ, ನಮ್ಮ ಸಾಮಾಜಿಕ ಸಂರಚನೆಯ ಸ್ವರೂಪ ಹಾಗೂ ಅದರ ರುಚಿಯೂ ಹೌದು ಎನ್ನಿಸುತ್ತದೆ.

'ನೆನಪಿನ ಉಗ್ರಾಣ' ಕೃತಿ ರೂಪುಗೊಂಡಿರುವ ಬಗೆಯೂ ವಿಶಿಷ್ಟವಾದುದು. ಲಲಿತಮ್ಮನವರು ತಮಗೆ ಬರೆದ ಪತ್ರಗಳನ್ನು ಆಧರಿಸಿ, ವೈದೇಹಿ ಅವರು ಈ ಕೃತಿ ರೂಪಿಸಿದ್ದಾರೆ. ಸರಳತೆಯನ್ನೇ ಸೌಂದರ್ಯವಾಗುಳ್ಳ ಈ ಕೃತಿ, ಸಂದುಹೋದ ಕಾಲದ ಮೌಲ್ಯಗಳನ್ನು ಈ ಕಾಲಕ್ಕೆ ದಾಟಿಸುವ ಪ್ರಯತ್ನದಂತಿದೆ.

ಲಲಿತಮ್ಮನವರನ್ನು ವೈದೇಹಿ ಅವರು, 'ಕನ್ನಡ ಲೋಕ ಕಂಡ ಒಬ್ಬ ಅದ್ಭುತ ಮಹಿಳೆ', 'ಇನ್ನೊಬ್ಬರಿಗಾಗಿ ಪ್ರಾರ್ಥಿಸುವ, ಇನ್ನೊಬ್ಬರ ಒಳಿತಿಗಾಗಿ ಗಂಟೆಗಟ್ಟಲೆ ಪೂಜೆ ಮಾಡುವ, ಧ್ಯಾನಿಸುವ ನಮ್ಮ ಲೇಖಕಿ ಲಲಿತಮ್ಮ ನಮ್ಮೊಡನಿರುವುದು ನಮ್ಮ ಭಾಗ್ಯ' ಎಂದು ಬಣ್ಣಿಸಿದ್ದಾರೆ. ಹೌದು, ಲಲಿತಮ್ಮ ನಮ್ಮ ಭಾಗ್ಯ ಅಂತ ಈ ಪುಸ್ತಕ ಓದಿದ ಯಾರಿಗಾದರೂ ಅನ್ನಿಸದೇ ಇರದು.

●